ದಯಮಾಡಿ ಮಾನ್ಯ ಸಚಿವರು ಒಂದು ದಿವಸ ಅಲ್ಲಿಗೆ ಬಂದು ನೋಡಲಿ. ನಾನು ಹೇಳುವುದರಲ್ಲಿ ಸತ್ಯತೆ ಇದ್ದರೆ, ಮಾನ್ಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳನ್ನು ಸೆವೆಯಿಂದ ಖಾಯಂ ಆಗಿ ನಿವೃತ್ತಿಗೊಳಿಸಬೇಕು. ಇಲ್ಲದಿದ್ದರೆ ನನ್ನನ್ನಾದರೂ ರಾಜಕೀಯದಿಂದ ಖಾಯಂ ಆಗಿ ನಿವೃತ್ತಿಗೊಳಿಸಬೇಕು, ಅದನ್ನು ನಾನು ಒಪ್ಪಿಕೊಳ್ಳಲಿಕ್ಕೆ ತಯಾರಿದ್ದೇನೆ. ನಾನು ಸತ್ಯ ಹೇಳುತ್ತಿದ್ದೇನೆ. ಮಾನ್ಯ ಸಚಿವರು ದಯವಿಟ್ಟು ಬರಬೇಕು.

ಶ್ರೀ ಧರ್ಮಸಿಂಗ್:- ನಾವು ಮತ್ತು ನೀವೂ ಇಬ್ಬರೂ ಖುದ್ದಾಗಿ ಅಲ್ಲಿಗೆ ಹೋಗಿ ಕ್ರಮ ತೆಗೆದುಕೊಳ್ಳೋಣ.

(ಈ) ಮೈಸೂರಿನಲ್ಲಿ ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಆಡಳಿತ ವೈಖರಿ ಕುರಿತು.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ (ಗುಂಡ್ಲುಪೇಟೆ):- ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಇರತಕ್ಕಂಥ ಮರಿಮಲ್ಲಪ್ಪ ವಿದ್ಯಾ ಸಂಸ್ಥೆ ರ್ಯಾಂಕುಗಳ ಕಣಜವೆಂದು ಹೆಸರು ಪಡೆದಿದೆ. ಸುಮಾರು ವರ್ಷಗಳಿಂದ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಸಾಕಷ್ಟು ರ್ಯಾಂಕ್‌ಗಳನ್ನು ಆ ಕಾಲೇಜ್ ಪಡೆದಿದೆ. ಅದಕ್ಕಾಗಿ ರಾಜ್ಯದ ಮೂಲೆ ಮೂಲೆಗಳಿಂದ ಆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಬೇಕೆಂದು ಪೋಷಕರು ವಿದ್ಯಾರ್ಥಿಗಳನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರತಕ್ಕಥ ವಿಚಾರವೇ ಆಗಿದೆ. ಇಂತಹ ಒಂದು ಸಂಸ್ಥೆಯಲ್ಲಿ ಇತ್ತೀಚೆಗೆ ಹಿಂದೆ ಅಲ್ಲಿಯ ಗೌರವ ಕಾರ್ಯದರ್ಶಿ ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದಂತಹ ಶಿವಲಿಂಗಯ್ಯನವರು ನಿಧನರಾದ ಮೇಲೆ 1999ರಿಂದ ಅಲ್ಲಿಯ ಆಡಳಿತ ಮಂಡಳಿಯಲ್ಲಿ ಅನೇಕ ನ್ಯೂನತೆಗಳು ಉಂಟಾಗಿ, ಇವತ್ತು ಸಂಸ್ಥೆಯ ಆಡಳಿತ ವೈಖರಿ ಒಂದು ಗೊಂದಲದ ಗೂಡಾಗಿದೆ. ಅದರಲ್ಲಿ ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಾಲೇಜ್‌ನಲ್ಲಿ ಕಳೆದ 15 ವರ್ಷಗಳಿಂದ ಪ್ರಾಚಾರ್ಯರಾಗಿ ಕೆಲಸ ನಿರ್ವಹಿಸಿರತಕ್ಕಂತಹ ಡಾ।। ಜೆ.ಎಸ್. ರತ್ನಮ್ಮನವರು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಸೆನೆಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದು ಈ ಕಾಲೇಜಿನ ಉನ್ನತಿಗಾಗಿ ಅವರೂ ಕೂಡ ಸಾಕಷ್ಟು ಕಾರಣಕರ್ತರಾಗಿದ್ದಾರೆ. ಇಂತಹವರ ಮೇಲೆ 1999ರಲ್ಲಿ ಅಲ್ಲಿಯ ರಾಜ್ಯಶಾಸ್ತ್ರದ ಉಪನ್ಯಾಸಕರಾಗಿದ್ದ ಕೆ.ಎನ್ ಪಂಚಾಕ್ಷರಿಸ್ವಾಮಿಯವರು ಮರಿಮಲ್ಲಪ್ಪ ಆಡಳಿತ ಮಂಡಳಿಗೆ ಗೌರವ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಇವರು ಯಾವುದೇ ಅಕಾಡೆಮಿಕ್ ಹೆಡ್ ಆಗದೇ ಇದ್ದರೂ ಕೂಡ ಇವರನ್ನು ಅಲ್ಲಿಯ ಗೌರವ ಕಾರ್ಯದರ್ಶಿ ಮತ್ತು ಟ್ರಸ್ಟ್ ಆಗಿ ನೇಮಕ ಮಾಡಿರತಕ್ಕಂಥಾದ್ದು ಕಾನೂನು ಬಾಹಿರವಾಗಿದೆ. ಇವರನ್ನು ನೇಮಕ ಮಾಡಿಕೊಳ್ಳುವುದು ಸೂಕ್ತ ಅಲ್ಲವೆಂದು ಹೇಳಿ ಟ್ರಸ್ಟಿ ಆಗಿದ್ದಂತಹ ಡಾ।। ರತ್ನಮ್ಮನವರು ಆಡಳಿತ ಮಂಡಲಿಯವರಲ್ಲಿ ಪ್ರಸ್ತಾಪ ಮಾಡಿದ್ದರಿಂದ ಅಂದಿನಿಂದ ಅವರಿಗೆ ಸತತವಾಗಿ ಕಿರುಕುಳವನ್ನು ಆಡಳಿತ ಮಂಡಳಿಯವರು ನೀಡುತ್ತಾ ಬಂದಿದ್ದಾರೆ ಮತ್ತು ಇಲ್ಲಸಲ್ಲದ ಆರೋಪಗಳನ್ನು ಡಾ।। ರತ್ನಮ್ಮನವರ ಮೇಲೆ ಹೊರಿಸಿ ಅವರಿಗೆ ಕಿರುಕುಳ ನೀಡುತ್ತಿದ್ದಾರೆ. ಅವರು ರಜ ಹೋದ ಅವಧಿಯಲ್ಲಿ ಆಡಳಿತ ಮಂಡಳಿ ಇವರ ಬಗ್ಗೆ ಎತ್ತಿದ ಆರೋಪಗಳಿಗೆ ಯಾವುದೇ ಪ್ರಾಥಮಿಕ ವಿಚಾರಣೆ ಮಾಡದೆ ಶ್ರೀಮತಿ ರತ್ನಮ್ಮನವರಿಗೆ ಅಮಾನತ್ತಿನಲ್ಲಿಡಲು ನಿರ್ಣಯಿಸಿ, ಈಗ 10 ತಿಂಗಳ ಕಾಲದಲ್ಲಿ ಅವರಿಗೆ ಅಮಾನತ್ತಿನಲ್ಲಿಟ್ಟು ಇದುವರೆಗೆ ಅದನ್ನು ತೆರವುಗೊಳಿಸಿಲ್ಲ. ಅವರನ್ನು ಅಮಾನತ್ತಿನಲ್ಲಿಡುವುದರ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯಿಂದ ಯಾವುದೇ ಅನುಮತಿ ಕೂಡ ಅವರು ಪಡೆದಿರುವುದಿಲ್ಲ. ಈ ರೀತಿಯಲ್ಲಿ

ಅನೇಕ ಸುತ್ತೋಲೆಗಳು, ನೋಟೀಸ್‌ಗಳನ್ನು ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆ ಆ ಸಂಸ್ಥೆಯ ಆಡಳಿತ ಮಂಡಳಿ ಮೇಲೆ ಕೊಟ್ಟಿದ್ದರೂ ಕೂಡ ಅದು ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೇ ಸ್ವೇಚ್ಛೆಯಿಂದ ಮನಬಂದಂತೆ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಅವಧಿಯಲ್ಲಿ ಅವರನ್ನು ಅಮಾನತ್ತುಗೊಳಿಸಿದ ಮೇಲೆ ಯಾರು ಗೌರವ ಕಾರ್ಯದರ್ಶಿಗಳಾಗಿ ನೇಮಕಗೊಂಡಿದ್ದಾರೆ, ಅವರು ಎರಡು ವರ್ಷಗಳ ಕಾಲ ಸತತವಾಗಿ ಗೈರುಹಾಜರಿ ಆಗಿದ್ದರೂ ಕೂಡ ಅಲ್ಲಿರತಕ್ಕಂತಹ ಹಿರಿಯ ಉಪನ್ಯಾಸಕರಿಗೆ ಬೆದರಿಸಿ ಮಲ್ಲಮ್ಮ ಮರಿಮಲ್ಲಪ್ಪ ಕಾಲೇಜಿನ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದೂ ಕೂಡ ಕಾನೂನು ಬಾಹಿರವಾಗಿದೆ. ಈ ಆಡಳಿತ ಮಂಡಳಿಯಲ್ಲಿ ಒಂದೇ ಕುಟುಂಬದ ಏಳು ಜನ ಸದಸ್ಯರಿದ್ದಾರೆ. ಇದು ಗ್ರಾ ೃಂಟ್ ಇನ್ ಏಡ್ ಕೋಡ್ ನಿಯಮದ 11 ಮತ್ತು 14ರ ರೀತ್ಯ ವಿರುದ್ಧವಾಗಿದೆ. ಆದರೂ ಕೂಡ ಅವರು ಇದನ್ನು ನಿರ್ಲಕ್ಷಿಸಿ ಆಡಳಿತ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಕಾಯಿದೆ 1983 ರೀತ್ಯ ಮ್ಯಾನೇಜಿಂಗ್ ಕಮಿಟಿ ಎರಡು ವರ್ಷಗಳಿಗೊಮ್ಮೆ ಪುನರ್ರ್‍ಚನೆಯಾಗುತ್ತದೆ. ಎರಡು ವರ್ಷಗಳಿಗೊಮ್ಮೆ ಪುನರ್ರ್‍ಚನೆಯಾಗಬೇಕು. ಆದರೆ ಆ ಸಂಸ್ಥೆ ನಿಮ್ಮ ಕಾನೂನು ರೀತಿ ಪುನರ್ರಚನೆ ಆಗುತ್ತಿಲ್ಲ. ಮಂಡಳಿ ಕಾರ್ಯ ನಿರ್ವಹಣೆ ಬಗ್ಗೆ ಅನೇಕ ನ್ಯೂನತೆಗಳಿವೆ. ಈ ಬಗ್ಗೆ ಮೈಸೂರಿನ ಅನೇಕ ಮಹಿಳಾ ಸಂಘಸಂಸ್ಥೆಗಳು ಪ್ರತಿಭಟನೆ ಮಾಡಿವೆ. ಸರ್ಕಾರದ ನೋಟೀಸ್‌ಗಳಿಗೆ ಸಂಸ್ಥೆಯಿಂದ ಯಾವುದೇ ಬೆಲೆ ಇಲ್ಲ, ಮಾನ್ಯತೆ ಕೊಡುತ್ತಿಲ್ಲ. ಗೌರವ ಕಾರ್ಯದರ್ಶಿಗಳಾಗಿರುವವರು ಈಗ ಏಕಕಾಲದಲ್ಲಿ ಕಾನೂನು ಬಾಹಿರವಾಗಿ ಪ್ರಾಚಾರ್ಯರಾಗಿ ಮುಂದುವರೆಯುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಒಬ್ಬ ಮಹಿಳೆ ಅಲ್ಲಿಯ ಪ್ರಾಂಶುಪಾಲರಾಗಿ ಇದ್ದವರಿಗೆ ಕೆಲಸದಿಂದ ತೆಗೆದು ಅಮಾನತ್ತಿನಲ್ಲಿಟ್ಟು ಇಷ್ಟು ದಿನಗಳಾದರೂ ಅದನ್ನು ತೆರವುಗಳಿಸದೇ, ಸಂಬಳ ವಗೈರೆ ಕೊಡಬೇಕಾಗಿರುವುದನ್ನು ಕೂಡ ಕೊಡದೇ ಕಳೆದ 10 ತಿಂಗಳುಗಳಿಂದ ಸತಾಯಿಸುತ್ತಿದ್ದಾರೆ, ಇದರ ಬಗ್ಗೆ ಸರ್ಕಾರ ಸೂಕ್ತ ತನಿಖೆ ಮಾಡಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಮತ್ತು ಕಾನೂನು ಬಾಹಿರವಾಗಿ ಆಡಳಿತ ನಡೆಸುತ್ತಿರುವ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಒಬ್ಬ ದಕ್ಷ ಅಧಿಕಾರಿಯನ್ನು ಅಲ್ಲಿ ವಿಶೇಷ ಅಧಿಕಾರಿಯನ್ನಾಗಿ ನೇಮಿಸಬೇಕೆಂದು ಈ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಡಾ॥ ಜಿ. ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಮಹದೇವಪ್ರಸಾದ್‌ರವರು ಎತ್ತಿರತಕ್ಕಂತಹ ಈ ಪ್ರಶ್ನೆ ಈಗಾಗಲೇ ಸರ್ಕಾರದಲ್ಲಿ ಇಲಾಖೆಯ ಗಮನಕ್ಕೆ ಬಂದಿದ್ದು, ಇದಕ್ಕೆ ಸೂಕ್ತ ಕ್ರಮವನ್ನು ಕೂಡ ತೆಗೆದುಕೊಂಡು ಆಗಿದೆ. ಶ್ರೀಮತಿ ಕೆ.ಎಸ್. ರತ್ನಮ್ಮ ಪ್ರಾಂಶುಪಾಲರು ಹಣ ದುರುಪಯೋಗ ಮಾಡಿದ್ದಾರೆ, ಕರ್ತವ್ಯಲೋಪ ಮಾಡಿದ್ದಾರೆ ಎಂದು ಅವರನ್ನು ದಿನಾಂಕ: 26.8.2001ಕ್ಕೆ ಅಮಾನತ್ತುಗೊಳಿಸಿದ್ದಾರೆ. ಅದಕ್ಕೆ ಯಾವುದೇ ರೀತಿಯಿಂದ ಸರ್ಕಾರದಿಂದ ಅವರು ಅನುಮತಿ ಪಡೆದಿಲ್ಲ. ನಮ್ಮಲ್ಲಿರತಕ್ಕಂತಹ ಕಾಯಿದೆ ಪ್ರಕಾರ, ಅವರು ಸಸ್ಪೆಂಡ್ ಮಾಡಬೇಕಾದರೆ ಇಲಾಖೆಯಿಂದ ಪರ್ಮಿಷನ್ ತೆಗೆದುಕೊಂಡು ಸಸ್ಪೆಂಡ್ ಮಾಡಬೇಕಾಗುತ್ತದೆ. ಇಂತಹ ಪ್ರಕ್ರಿಯೆಯನ್ನು ಅವರು ಮಾಡಿಲ್ಲ. ಆದ್ದರಿಂದ ಅದು ಕಾನೂನು ಬಾಹಿರವಾಗುತ್ತದೆ. ಅಲ್ಲಿರತಕ್ಕಂತಹ ಒಬ್ಬ ಲೆಕ್ಚರರ್ ಕೆ.ಎನ್ ಪಂಚಾಕ್ಷರಿಸ್ವಾಮಿಯವರು, ಒಬ್ಬ ಲೆಕ್ಚರರ್ ಅವರನ್ನು ತೆಗೆದು ಆಡಳಿತ ಮಂಡಳಿಯ ಕಾರ್ಯದರ್ಶಿಗಳಾಗಿ ನೇಮಕ ಮಾಡಿದ್ದಾರೆ. ಅದೂ ಕೂಡ ಕಾನೂನು ಬಾಹಿರವಾಗಿದೆ. ಇದಕ್ಕೆ

ಅವರಿಗೆ ನೋಟೀಸ್ ಮೇಲೆ ನೋಟೀಸ್ ಕೊಟ್ಟು, ಇದು ಗ್ರಾ ೃಂಟ್ ಇನ್ ಏಡ್ ಸಂಸ್ಥೆ ಆಗಿದ್ದರಿಂದ ಗ್ರಾ ೃಂಟ್ ಕೂಡ ಸ್ಟಾಪ್ ಮಾಡಿದ್ದೆವು. ಆ ನಂತರ ಅಲ್ಲಿರತಕ್ಕಂತಹ ಬೇರೆ ನೌಕರರು, ಉಪಾಧ್ಯಾಯರು ಅವರೆಲ್ಲಾ ರೆಪ್ರಸೆಂಟೇಷನ್ ಮಾಡಿ ನಾವು ಏನು ತಪ್ಪು ಮಾಡಿದ್ದೇವೆ, ನಮಗೆ ಏಕೆ ಗ್ರಾ ೃಂಟ್ ನಿಲ್ಲಿಸುತ್ತೀರಿ ಎಂದು ಹೇಳಿದ ಮೇಲೆ ಅದನ್ನು ರೆಸ್ಟೋರ್ ಮಾಡಿ, ಶ್ರೀ ಪಂಚಾಕ್ಷರಿಸ್ವಾಮಿ ಮತ್ತು ಶ್ರೀಮತಿ ರತ್ನಮ್ಮನವರಿಗೆ ಈ ಇಬ್ಬರಿಗೆ ಸಂಬಳ ಗ್ರಾ ೃಂಟ್ ನಿಲ್ಲಿಸಿದ್ದೇವೆ. ಈಗಾಗಲೇ ಶ್ರೀಮತಿ ರತ್ನಮ್ಮನವರು ಒಂದು ಅಪೀಲ್ ಮಾಡಿಕೊಂಡಿದ್ದಾರೆ. ಕಾಲೇಜು ಶಿಕ್ಷಣ ಕಾಯಿದೆ 1983ರ ಕಲಂ 130ರ ಪ್ರಕಾರ ಕಮೀಷನರ್ ಹತ್ತಿರ ಅಪೀಲ್ ಮಾಡಿಕೊಂಡಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಯುತ್ತಿದೆ, ವಿಚಾರಣೆ ಮುಗಿದಮೇಲೆ ಈ ಸಮಸ್ಯೆ ಬಗೆಹರಿಯುತ್ತದೆ ಆ ಸಂಸ್ಥೆಯವರು ಯಾವುದೇ ರೀತಿಯಲ್ಲಿ ಸರ್ಕಾರದ ಕಾಯಿದೆಗಳನ್ನು ಫಾಲೋ ಮಾಡುತ್ತಿಲ್ಲ ಮತ್ತು ಅಲ್ಲಿಯ ಆಡಳಿತ ಮಂಡಳಿ ಬೇರೆ ರೀತಿ ಮಾಡುತ್ತಾರೆಂದು ಹೇಳಿದ್ದೀರಿ, ಅದಕ್ಕೆ ನಾನು ಆಯುಕ್ತರ ಹಂತದಲ್ಲಿ ವಿಚಾರಣೆ ಮಾಡಿಸುತ್ತೇನೆ.

(ಉ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಕಡಿಮೆಯಾಗುತ್ತಿರುವುದರ ಬಗ್ಗೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ):– ಮಾನ್ಯ ಅಧ್ಯಕ್ಷರೆ, ಈ ಶೂನ್ಯವೇಳೆಯಲ್ಲಿ ನಾನು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ. ಮಾನ್ಯ ರಂಗನಾಥ್‌ರವರೆ, ನನಗೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿರುವುದರಿಂದ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಈ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉತ್ತರ ಕನ್ನಡ ಜಿಲ್ಲೆ ದಾಖಲೆ ಪ್ರಕಾರ ಶೇಕಡ 80ರಷ್ಟು ಅರಣ್ಯ ಇರುವ ಜಿಲ್ಲೆ. ನೀವು ಒಮ್ಮೆ ನಮ್ಮ ಜಿಲ್ಲೆಗೆ ಬರಬೇಕು. ನಮ್ಮದು ಬಹಳ ಸಂಪದ್ಭರಿತವಾದ ಜಿಲ್ಲೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಸಮೃದ್ಧವಾದ ಅರಣ್ಯ ಇದೆ. ನಮ್ಮ ಜಿಲ್ಲೆಯಲ್ಲಿ ಬೇರೆ ಬೇರೆ ಯೋಜನೆಗಳಿಂದ ಅರಣ್ಯದ ಮುಳುಗಡೆ ಆಗಿದೆ ಅರಣ್ಯದ ಕಣಾವು ಆಗಿದೆ. ಹಾಗಾಗಿ ಅರಣ್ಯದ ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಈ ಆತಂಕ ನಮ್ಮ ಜಿಲ್ಲೆಯ ಜನರಿಗೆ ಇದೆ. ಅದು ಬೇರೆ ವಿಚಾರ. ನಾನು ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತರುವ ವಿಷಯ ಏನೆಂದರೆ, ನಮ್ಮ ಜಿಲ್ಲೆಯಲ್ಲಿ ಅರಣ್ಯ ಲೂಟಿ ಅವ್ಯಾಹತವಾಗಿ, ನಿರಂತರವಾಗಿ ನಡೆಯುತ್ತಿದೆ. ನಿನ್ನೆ ಹೀಗೆ ನಾಗರಹೊಳೆ ಬಗ್ಗೆ ಬೇರೆ ಬೇರೆ ವಿಷಯ ಪ್ರಸ್ತಾಪ ಆಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಗಲು ಲೂಟಿ ರಾತ್ರಿ ಲೂಟಿ ಇದು ನಿರಂತರವಾಗಿ ನಡೆಯುತ್ತಿದೆ. ಮಾನ್ಯ ಅರಣ್ಯ ಸಚಿವರು ನಮ್ಮ ಜಿಲ್ಲೆಗೆ 2-3 ದಿನಗಳ ಕಾಲ ಪ್ರವಾಸ ಬಂದಿದ್ದರು. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಹೀಗೆ ಅರಣ್ಯ ಲೂಟಿ ನಡೆಯುತ್ತಿದೆ ಎಂದು ಅವರ ಗಮನಕ್ಕೆ ಬಂದಿದೆ. ಇಲ್ಲಿ ಶ್ರೀಗಂಧ, ಬೀಟೆ, ಸಾಗುವಾನಿ ಬೇರೆ ಬೇರೆ ಜಾತಿಯ ಗಿಡಗಳು ಏನಿದೆ ಇವೆಲ್ಲವನ್ನು ಸಹ ಹಗಲಿನಲ್ಲಿಯೇ ಕಡಿದು ಅರಣ್ಯಗಳ್ಳರು ಲೂಟಿ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಅನೇಕ ಸಂದರ್ಭಗಳಲ್ಲಿ ಶಾಮೀಲಾಗಿದ್ದಾರೆ. ಬೇರೆ ಬೇರೆ ಕೇಸ್ ಉದಾಹರಿಸುತ್ತಾ ಹೋದರೆ ಸಮಯ ಬೇಕಾಗುತ್ತದೆ. ಮಾನ್ಯ ಸಚಿವರಿಗೆ ಗೊತ್ತಿದೆ, ನನ್ನದೇ ಕ್ಷೇತ್ರದಲ್ಲಿ ರಾಮನಗೊಳ್ಳಿ ಎನ್ನುವ ಅರಣ್ಯ ವಲಯ ಅಧಿಕಾರಿಗಳ ಮೇಲೆ ಅರಣ್ಯಗಳ್ಳರು ಹಲ್ಲೆ ಮಾಡಿದರು. ಅವರು ಕಳ್ಳಮಾಲು ಹಿಡಿಯುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ನಡೆಯಿತು. ಹಲ್ಲೆಯಾಗಿ ಕೈ ಮುರಿದು ಆಸ್ಪತ್ರೆಗೆ ದಾಖಲಾಗಿ ಅನೇಕ ಗಂಭೀರವಾದ ಸಮಸ್ಯೆಗಳು ಎದುರು ಆದುವು. ಇಂತಹ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು